

## ಮೇಘನಾ ಮುರಳಿ!

'ಇರುವುದೆಲ್ಲವ ಬಿಟ್ಟು' ಚಿತ್ರಮಂದಿರಗಳ ಹೊಸ್ತಿಲಲ್ಲಿರುವ (ಸೆ. 21ರಂದು ತೆರೆಗೆ) ಮೇಘನಾ ರಾಜ್ ನಟನೆಯ ಸಿನಿಮಾ. ಚಿತ್ರದ ನಿರ್ದೇಶನ ಕಾಂತ ಕನ್ನಲಿ ಅವರದು.

'ಇರುವುದೆಲ್ಲವ ಬಿಟ್ಟು' ಎನ್ನುವುದು ಗೋಪಾಲಕೃಷ್ಣ ಅಡಿಗರ 'ಮೋಹನ ಮುರಲಿ' ಕವಿತೆಯ ಸಾಲು. ಇಹದ ಕನವರಿಕೆಗಳ ಜೊತೆಗೆ ಪರದ ಹಂಬಲವನ್ನೂ ಸೂಕ್ಷ್ಮವಾಗಿ ಹೇಳುವ ಕವಿತೆಯ ಸಾಧ್ಯತೆಗಳು ಚಿತ್ರದಲ್ಲೂ ಇವೆಯಂತೆ. ನಿರ್ದೇಶಕನಾಗಿ ಗುರ್ತಿಸಿಕೊಳ್ಳಲು ಪಡಿಪಾಟಲು ಪಡುತ್ತಿದ್ದ ಸಮಯದಲ್ಲಿ ಹೊಳೆದ ಕಥೆಯನ್ನು ಕಾಂತ ಈಗ ಚಿತ್ರರೂಪಕ್ಕೆ ತಂದಿದ್ದಾರೆ.

ಸದ್ಯಕ್ಕೆ ಸಿನಿಮಾ ಸುದ್ದಿ ಮಾಡಿರುವುದು 'ಇರುವೆ ಬಿಟ್ಟುಕೊಳ್ಳುವುದೆ ಜೀವನ' ಎನ್ನುವ ಉಪಶೀರ್ಷಿಕೆಯ ಮೂಲಕ. ಇರುವೆ ಬಿಟ್ಟುಕೊಂಡ ಅನುಭವ ಮೇಘನಾ ಅವರದು. ಚಿತ್ರದ ಗೀತೆಯೊಂದರಲ್ಲಿ ಮೇಘನಾ ಅವರು ತಿಲಕ್ ಜೊತೆಗೆ ಬಿಡುಬೀಸಾಗಿ ಕಾಣಿಸಿಕೊಂಡಿರುವುದು ಸಾಮಾಜಿಕ ಜಾಲತಾಣಗಳಲ್ಲಿ ಚರ್ಚೆಗೆ ಕಾರಣವಾಗಿದೆ. ಕನ್ನಡದ ಹುಡುಗಿಯರು ಮೈ ಚಳಿ ಬಿಟ್ಟು ನಟಿಸಿದಾಗ ಟೀಕೆಗೊಳಗಾಗುವುದು ಕನ್ನಡ ಚಿತ್ರರಂಗಕ್ಕೆ ಹೊಸತೇನೂ ಅಲ್ಲ. ಕನ್ನಡತಿಯರು ನಟನೆಯ ಮೂಲಕವಷ್ಟೇ ಸುದ್ದಿ ಮಾಡಬೇಕು ಎನ್ನುವ ಮನಸ್ಥಿತಿ ಕೆಲವು ಚಿತ್ರರಸಿಕರದು. ಈ ಹಿನ್ನೆಲೆಯಲ್ಲೇ ಮೇಘನಾ ಸಾಮಾಜಿಕ ಜಾಲತಾಣಗಳಲ್ಲಿ ಟೀಕೆಗೊಳಗಾಗಿದ್ದರು.

ಟೀಕೆಗಳ ಬಗ್ಗೆ ಮೇಘನಾ ತಲೆ ಕೆಡಿಸಿಕೊಂಡಿಲ್ಲ. ಸಿನಿಮಾದಲ್ಲಿ ತಮ್ಮ ಪಾತ್ರ ವಿಶಿಷ್ಟವಾಗಿದೆ ಎನ್ನುವ ಖುಷಿ ಅವರದು. ತಮಿಳು ನಟ ಸಿಂಬು ಗೀತೆಯೊಂದನ್ನು ಹಾಡಿರುವುದು ಹಾಗೂ ನಟ ಶ್ರೀಮುರಳಿ ನಿರೂಪಕನಾಗಿ ಧ್ವನಿ ನೀಡಿರುವುದು ಚಿತ್ರದ ಹೈಲೈಟ್‌ಗಳಲ್ಲಿ ಸೇರಿವೆ.

## ಬಣ್ಣ ಕಳಚಿದ ಬಳಿಕ...

'ಕಲಾವಿದರು ಪರದೆಯ ಮೇಲೆ ಸರ್ವಗುಣ ಸಂಪನ್ನರು. ಮೇಕಪ್ ಕಳಚಿದ ಮೇಲೆ ಅವರು ಎಲ್ಲರಂತೆ ಸಾಮಾನ್ಯರು' – ಇದು 'ದಿ ಬೆಸ್ಟ್ ಆ್ಯಕ್ಟರ್' ಸಿನಿಮಾದ ಒಂದು ಡೈಲಾಗ್. ಇದು ಸಂಭಾಷಣೆಯ ತುಣುಕಷ್ಟೇ ಅಲ್ಲ; ಚಿತ್ರದ ಕಥೆಯನ್ನು ಸೂಚಿಸುವ ಬೀಜವಾಕ್ಯವೂ ಹೌದು ಎನ್ನುವುದು ಚಿತ್ರತಂಡದ ವಿಶ್ವಾಸ.

ಕಳೆದ ವಾರ ಟ್ರೈಲರ್ ಬಿಡುಗಡೆಯಾಗಿರುವ 'ಬೆಸ್ಟ್ ಆ್ಯಕ್ಟರ್'ನ ನಿರ್ದೇಶನ ನಾಗರಾಜ್ ಸೋಮಯಾಜಿ ಅವರದು. ನಟ–ನಟನೆಯ ರೂಪದಲ್ಲಿ ಬದುಕಿನ ತಾತ್ವಿಕತೆಯ ಶೋಧ ಚಿತ್ರದಲ್ಲಿ ಇರುವಂತಿದೆ. ಯಕ್ಷಗಾನ ಕಲಾವಿದನೊಬ್ಬನ ಬದುಕಿನ ಬಿಂಬಗಳು ಚಿತ್ರದಲ್ಲಿವೆ. ಕಥೆಗಾರ ಶ್ರೀಧರ ಬನವಾಸಿ ಅವರ ಕಥೆಯನ್ನು ಆಧರಿಸಿ ನಾಗರಾಜ್ ಚಿತ್ರಕಥೆ ರಚಿಸಿದ್ದಾರೆ. ಅಂದಹಾಗೆ, ಈ ಸಿನಿಮಾದ ಅವಧಿ ನಲವತ್ತಮೂರು ನಿಮಿಷ! ಅವಧಿ ಕಡಿಮೆಯಾಗಿದ್ದರೂ ತಮ್ಮ ಕೃತಿಯನ್ನು ನಾಗರಾಜ್ ಸಿನಿಮಾ ಎಂದೇ ಕರೆದುಕೊಂಡಿದ್ದಾರೆ.

ಮಾಧವ ಕಾರ್ಕಡ ಚಿತ್ರದ ನಾಯಕನಟ. ರಂಗಭೂಮಿಯ ಮೂಲಕ ನಟನೆಯ ಪಟ್ಟುಗಳನ್ನು ಕಲಿತಿರುವ ಮಾಧವ ತುಳು ಸಿನಿಮಾಗಳಲ್ಲೂ ಗುರ್ತಿಸಿಕೊಂಡವರು. ಸಂಚಾರಿ ವಿಜಯ್ ಮುಖ್ಯಪಾತ್ರವೊಂದರಲ್ಲಿ ನಟಿಸಿದ್ದಾರಂತೆ. ಉಳಿದಂತೆ ಪ್ರತಿಮಾ ನಾಯಕ್, ಮಾಸ್ಟರ್ ಉಲ್ಲಾಸ್ ಹಾಗೂ ಶಿಶಿರ್ ಕುಮಾರ್ ತಾರಾಗಣದಲ್ಲಿರುವ ಪ್ರಮುಖರು. ಅರ್ಜುನ ರಾಮು ಸಂಗೀತ ಸಂಯೋಜನೆ ಹಾಗೂ ಎಸ್.ಕೆ. ರಾವ್ ಛಾಯಾಗ್ರಹಣ ಚಿತ್ರಕ್ಕಿದೆ.

